**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.6012/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದ**

ನಾನು 9 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಸ್ವಲ್ಪ ಬರುತ್ತದೆ. ನನ್ನ ಮನೆಯಲ್ಲಿ ನಮ್ಮ ಅಪ್ಪ, ಅಮ್ಮ, ತಂಗಿ, ಇಬ್ಬರು ಅಕ್ಕಂದಿರು ಮತ್ತು ನಾನು ಇದ್ದೇವು. ಮನೆಯ ಸಂಪೂರ್ಣ ಜವಾಬ್ದಾರಿಯನ್ನು ನಾನೇ ತೆಗೆದುಕೊಂಡಿರುತ್ತೇನೆ. ನಾನು ವೈಭವ್ ಜ್ಯೂಸ್ ಸ್ಟಾಲ್ ನಲ್ಲಿ ಕೆಲಸ ಮಾಡುತ್ತಿದ್ದೇನು. ಅದರ ಮಾಲೀಕರು ಬೇರೆಯವರಿದ್ದಾರೆ. ನನಗೆ ತಿಂಗಳಿಗೆ ರೂ.15 ರಿಂದ 16 ಸಾವಿರ ಸಂಬಳವಿದೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಜ್ಯೂಸ್ ಸ್ಟಾಲ್ ನಲ್ಲಿ ಕೆಲಸ ಮಾಡುವುದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ.

ನನಗೆ ಆರೋಪಿ ಸುಮಾರು 8 ವರ್ಷಗಳಿಂದ ಪರಿಚಯ. ಸದರಿ ಅಂಶವನ್ನು ಪಿರ್ಯಾದಿಯಲ್ಲಿ ತಿಳಿಸಿಲ್ಲ. ಆರೋಪಿ ಮಟನ್ ಶಾಪ್ ಇಟ್ಟುಕೊಂಡಿದ್ದಾನೆ. ನಾನು ಮಟನ್ ತರಲು ಹೋದಾಗ ಆತ ಪರಿಚಯವಾಗಿದ್ದಾನೆ. ಇದನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಿಕ ಪರಿಚಯ ಇಲ್ಲ ಎಂದರೆ ಸರಿಯಲ್ಲ.

ನಾನು ಕಳುಹಿಸಿದ ನೋಟೀಸ್ ನಿಪಿ 4 ಆರೋಪಿಗೆ ಜಾರಿಯಾಗಿರುವ ಕುರಿತು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕ ದಿಂದು ಆರೋಪಿಗೆ ನೋಟೀಸ್ ಕಳುಹಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ದಿನ ಎಕ್ಕೆಗೊಂದಿ ಗ್ರಾಮದಿಂದ ಬರುತ್ತೇನೆ ಎಂದರೆ ಸರಿ. ನಿಪಿ 4 ರಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 4 ರಲ್ಲಿ ನನ್ನ ಮತ್ತು ವಕೀಲರ ಸಹಿ ಇಲ್ಲ ಎಂದರೆ ಸರಿ. ಅಂಚೆ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ 4 ಆರೋಪಿಗೆ ಜಾರಿಯಾಗಿಲ್ಲ ಎಂದುರೆ ಸರಯಲ್ಲ. ನಿಪಿ 4 ಆರೋಪಿಗೆ ಜಾರಿಯಾಗಿದ್ದರೆ ಆತ ಅದಕ್ಕೆ ಪ್ರತ್ಯುತ್ತರ ನೀಡುತ್ತಿದ್ದ ಎಂದರೆ ಸರಿ. ನಿಪಿ 4 ಆರೋಪಿಗೆ ಜಾರಿಂಯಾಗದೇ ಇರುವ ಕಾರಣ ಆತ ಅದಕ್ಕೆ ಪ್ರತ್ಯುತ್ತರ ನೀಡಲು ಸಾಧ್ಯವಾಗಲಿಲ್ಲ ಎಂದರೆ ಸರಿ. ಆರೋಪಿ ಯಾವ ದಿನದಂದು ಎಷ್ಟು ಹಣ ಕೇಳಿದ ಎಂದು ನಿಪಿ 4 ರಲ್ಲಿ ಮತ್ತು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಆರೋಪಿಗೆ 50 ಸಾವಿರ, 30 ಸಾವಿರ , 15 ಸಾವಿರ ರೂಗಳಂತೆ ಒಟ್ಟು 4 ಲಕ್ಷ ದ 80 ಸಾವಿರ ರೂಗಳನ್ನು ಹಂತ ಹಂತವಾಗಿ ಆರೋಪಿಗೆ ನೀಡಿದ್ದೇನೆ ಆದರೆ ದಿನಾಂಕ ನೆನಪಿಲ್ಲ. ಹಣ ನೀಡಿದಕ್ಕಾಗಿ ನಾನು ಒಂದು ಪುಸ್ತಕದಲ್ಲಿ ಬರೆದಿಕೊಂಡಿಲ್ಲ ಆಗ ದಿನಾಂಕ ನೆನಪಿತ್ತು. ನಾನು ಆರೋಪಿಗೆ ಹಣ ನೀಡುವ ಕುರಿತು ದಾಖಲೆಯನ್ನು ನೀಡಿಲ್ಲ ಎಂದರೇ ಸರಿಯಲ್ಲ.

ಆರೋಪಿ ನನಗೆ ಯೂನಿಯನ್ ಬ್ಯಾಂಕ್ ನ ಚೆಕ್ ನ್ನು ನೀಡಿದ್ದಾರೆ . ಚೆಕ್ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಯಾವ ದಿನಾಂಕ ನಮೂದಿಸಿ ಚೆಕ್ ನೀಡಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಯಾವ ಕಾರಣಕ್ಕಾಗಿ ಚೆಕ್ ಅಮಾನ್ಯಗೊಂಡಿದೆ ಎಂದು ನನಗೆ ಗೊತ್ತಿಲ್ಲ.

ನಿಪಿ1 ರಲ್ಲಿ ಬೇರೆ ಬೇರೆ ಶಾಹಿಗಳಿಂದ ಬರೆಯಲಾಗಿದೆ ಎಂದರೆ ಸರಿ. ನಿಪಿ 1 ರ ಒಕ್ಕಣೆಗಳನ್ನು ಎಸ್ ಬಿ ಐ ಬ್ಯಾಂಕ್ ನವರು ಬರೆದಿದ್ದಾರೆ . ಅವರ ಹೆಸರು ನನಗೆ ಗೊತ್ತಿಲ್ಲ. ಹಣವನ್ನು ಸಹ ನಾನೇ ಬರೆಸಿದ್ದೇನೆ. ನಿಪಿ 2 ಮತ್ತು ನಿಪಿ1 ರಲ್ಲಿರುವ ಬರವಣಿಗೆ ಒಂದೇ ರೀತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ರ ಒಕ್ಕಣೆಗಳನ್ನು ಬ್ಯಾಂಕ್ ನವರೇ ಬರೆದಿದ್ದಾರೆ. ನಿಪಿ 1 ರಲ್ಲಿರುವ ಬರವಣಿಗೆ ಹಾಗೂ ಸಿಸಿ 5991/2024 ರಲ್ಲಿ ನಿಪಿ 1 ರಲ್ಲಿರುವ

ಬರವಣಿಗೆ ಒಂದೇಯಾಗಿದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಚೆಕ್ ಅಮಾನ್ಯಗೊಂಡಿದೆ ಎಂದು ನಿಪಿ 3 ರಲ್ಲಿ ಸ್ಪಷ್ಟವಾಗಿ ಬರೆದಲ್ಲ ಎಂದು ಸರಿ. ಯಾವ ಕಾರಣಕ್ಕಾಗಿ ಚಕ್ ಅಮಾನ್ಯಗೊಂಡಿದೆ ಎಂದು ನಾನ್ನು ಬ್ಯಾಂಕ್ ನವರಿಗೆ ಕೇಳೀಲ್ಲ.

ನನ್ನ ಮತ್ತು ಆರೋಪಿ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಹರಿಹರ ದ ಬ್ಯೂಟಿಪಾರ್ಲರ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಬೆಂಗಳೂರಿನಲ್ಲಿ ಕೆಲಸಮಾಡಡುತ್ತಾರೆ ಎಂದು ಹೇಳುತ್ತಾರೆ. ನನ್ನ ತಂಗಿ ಆರೋಪಿಗೆ ಸಾಲವನ್ನು ಕೊಡಿಸುತ್ತೇನೆ ಅದರ ಭದ್ರತೆಗಾಗಿ 2 ಚೆಕ್ ಗಣಳನ್ನು ಕೊಡಿ ಎಂದು ಕೇಳಿದಾಗ ಆರೊಪಿ 2 ಚೆಕ್ಗಳನ್ನು ನನ್ನ ತಂಗಿಗೆ ನೀಡಿದ್ದು ಆ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು 2 ಪಿರ್ಯಾದಿಗಳನ್ನು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ . 2 ಚೆಕ್ ಗಳನ್ನು ಪಡೆದುಕೊಂಡು ಯಾವುದೇ ಸಾಲವನ್ನು ಪಿರ್ಯಾದಿಗೆ ಕೊಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.